2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸ್ಪೇಷಲ್ ಕೇಸ್ ನಂ.518/2025
ಪಿ.ಡಬ್ಲ್ಯೂಃ 1
ಸಿ.ಡಬ್ಲ್ಯೂಃ 1

ಸಾಕ್ಷಿಯ ಹೆಸರುಃ ಶ್ರೀ. ಸುರೇಶ ಪಿ. ಶಿಂಗಿ
ತಂದೆಯ ಹೆಸರುಃ ಪಾಂಡುರಂಗ
ವಯಸ್ಸುಃ 55 ವರ್ಷ
ಉದ್ಯೋಗಃ ಪೋಲೀಸ್ ನಿರೀಕ್ಷಕರು, ಕಾಕತಿ ಪೋಲೀಸ್ ಠಾಣೆ
ವಾಸಃ ಕಾಕತಿ

**ದಿನಾಂಕಃ 28.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ದಿಃ 01.09.2024 ರಿಂದ ಇಲ್ಲಿಯವರೆಗೆ ನಾನು ಕಾಕತಿ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

1. ದಿಃ 24.05.2025 ರಂದು ನಾನು ಠಾಣೆಯಲ್ಲಿದ್ದಾಗ ಬೆಳಗ್ಗೆ 11.00 ಗಂಟೆಗೆ ಬಂದ ಬಾತ್ಮೀ ಏನೆಂದರೆ, ಹೊನಗಾ ಕೈಗಾರಿಕಾ ಅಭಿವೃದ್ಧಿ ಪ್ರದೇಶಕ್ಕೆ ಹೋಗುವ ರಸ್ತೆಯಲ್ಲಿ ರಸಾಯಿ ದಾಬಾ ಹತ್ತಿರ ಇಬ್ಬರು ವ್ಯಕ್ತಿಗಳು ಗಾಂಜಾ ಮಾರಾಟ ಮಾಡುತ್ತಿದ್ದಾರೆ ಮಾಹಿತಿ ಬಂದಿರುತ್ತದೆ. ನಾನು ಕೂಡಲೇ ವಿಷಯವನ್ನು ಮೇಲಾಧಿಕಾರಿಗೆ ಕರೆ ಮೂಲಕ ತಿಳಿಸಿ, ನಂತರ ಸಹಾಯಕ ಪೋಲೀಸ್ ಆಯುಕ್ತರು ಬೆಳಗಾವಿ ಗ್ರಾಮೀಣ ವಲಯ ಇವರಿಗೆ ಪತ್ರ ಬರೆದು ಬಾತ್ಮೀ ಬಂದ ಆಧಾರದ ಮೇಲೆ ದಾಳಿ ಮಾಡಲು ಅನುಮತಿ ಕೋರಿರುತ್ತೇನೆ. ಅದರಂತೆ ಅವರು ಅನುಮತಿ ನೀಡಿರುತ್ತಾರೆ.

2. ಸಾಕ್ಷಿಯು ಈಗ ಎರಡು ದಾಖಲೆಗಳನ್ನು ನೋಡಿ ಒಂದು ತಾನು ದಾಳಿಗೆ ಅನುಮತಿ ಕೋರಿ ಬರೆದ ಪತ್ರ ಎಂದು, ಸದರಿ ದಾಖಲೆಯನ್ನು ಈಗ ನಿಪಿಃ 1 ಎಂದು, ಸಾಕ್ಷಿಯ

ಸಹಿಯನ್ನು ನಿಪಿಃ 1(ಎ) ಎಂದು ಗುರುತಿಸಲಾಯಿತು. ಮತ್ತೊಂದನ್ನು ಅನುಮತಿ ನೀಡಿದ ಆದೇಶ ಎಂದು ಗುರುತಿಸಿದ್ದು ಅದನ್ನು ಈಗ ನಿಪಿಃ 2 ಎಂದು ಗುರುತಿಸಲಾಯಿತು.

3. ನಂತರ ಬೆಳಗಾವಿ ಉಪವಿಭಾಗಾಧಿಕಾರಿಗಳಿಗೆ ಪತ್ರ ಬರೆದು ಈ ಪ್ರಕರಣದ ದಾಳಿ ಕಾಲಕ್ಕೆ ಒಬ್ಬ ಪತ್ರಾಂಕಿತ ಅಧಿಕಾರಿ ಹಾಗೂ ಆ ಸಂದರ್ಭಕ್ಕೆ ಪಂಚನಾಮೆಗೆ ಇಬ್ಬರು ಸರ್ಕಾರಿ ನೌಕರರನ್ನು ಕಳುಹಿಸಿಕೊಡಿ ಎಂದು ಕೋರಿರುತ್ತೇನೆ. ಸಾಕ್ಷಿಯು ತನ್ನ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿಃ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 3(ಎ) ಎಂದು ಗುರುತಿಸಲಾಯಿತು. ನಂತರ ಈ ಬಗ್ಗೆ ಉಪಾವಿಭಾಗಾಧಿಕಾರಿಗಳು ಗ್ರೇಡ್ 2 ತಹಶೀಲ್ದಾರವರನ್ನು ಪತ್ರಾಂಕಿತ ಅಧಿಕಾರಿಯಾಗಿ ಹಾಗೂ ಮತ್ತಿಬ್ಬರು ಸರ್ಕಾರಿ ನೌಕರರನ್ನು ಪಂಚರನ್ನಾಗಿ ನೇಮಿಸಿ ಆದೇಶ ಮಾಡಿರುತ್ತಾರೆ. ಸದರಿ ಆದೇಶವನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ಈಗ ನಿಪಿಃ 4 ಎಂದು ಗುರುತಿಸಲಾಯಿತು.

4. ಉಪವಿಭಾಗಾಧಿಕಾರಿಗಳು ಮಾಡಿದ ಆದೇಶದಂತೆ ಮೂರು ಜನ ಅಧಿಕಾರಿಗಳು ಮಧ್ಯಾಹ್ನ 12.30 ಗಂಟೆ ಸುಮಾರಿಗೆ ನಮ್ಮ ಠಾಣೆಗೆ ಬಂದಿರುತ್ತಾರೆ. ನಂತರ ಪತ್ರಾಂಕಿತ ಅಧಿಕಾರಿಗೆ ಜ್ಞಾಪನ ನೀಡಿ ದಾಳಿ ಕಾಲಕ್ಕೆ ಹಾಜರಾಗಲು ಅವರ ಅನುಮತಿ ಕೋರಿರುತ್ತೇನೆ ಅವರು ಒಪ್ಪಿರುತ್ತಾರೆ. ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಈಗ ನಿಪಿಃ 5 ಮತ್ತು 6 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು.

5. ಆ ಕಾಲಕ್ಕೆ ಇಬ್ಬರು ಸರ್ಕಾರಿ ನೌಕರರು ಸಹ ಬಂದಿದ್ದು ಅವರಿಗೂ ಸಹ ದಾಳಿ ಕಾಲಕ್ಕೆ ಪಂಚರಾಗಿ ಬರಲು ಒಪ್ಪಿಗೆ ಇದೆಯೇ ಎಂದು ನೋಟೀಸ್ ನೀಡಿರುತ್ತೇನೆ ಅವರು ಒಪ್ಪಿಗೆ ಸೂಚಿಸಿ ಒಪ್ಪಿಗೆ ಪತ್ರ ನೀಡಿರುತ್ತಾರೆ. ಸಾಕ್ಷಿಯು ನೋಟೀಸ್ ಹಾಗೂ ಒಪ್ಪಿಗೆ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿಃ 7 ರಿಂದ 10 ಎಂದು ಗುರುತಿಸಲಾಯಿತು.

6. ಅದೇರೀತಿ ತೂಕ ಮಾಡುವವನಿಗೆ ಠಾಣೆಗೆ ಕರೆಸಿದ್ದು ಆತನಿಗೂ ಸಹ ದಾಳಿ ಕಾಲಕ್ಕೆ ಹಾಜರಿರಲು ಒಪ್ಪಿಗೆ ಕೋರಿರುತ್ತೇನೆ ಆತ ಸಹ ಒಪ್ಪಿರುತ್ತಾನೆ. ಆತನಿಗೆ ನೀಡಿದ ನೋಟೀಸ್

ಹಾಗೂ ಆತ ನೀಡಿದ ಒಪ್ಪಿಗೆ ಪತ್ರ ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿಃ 11 ಮತ್ತು 12 ಎಂದು ಗುರುತಿಸಲಾಯಿತು.

7. ಅದೇರೀತಿ ದಾಳಿ ಕಾಲಕ್ಕೆ ವಿಡಿಯೋ ಮತ್ತು ಆಡಿಯೋ ಮಾಡಲು ಚಾಸಾಃ 15 ರವರಿಗೆ ಜ್ಞಾಪನ ನೀಡಿರುತ್ತೇನೆ ಅವರು ಸಹ ಒಪ್ಪಿಗೆ ನೀಡಿರುತ್ತಾರೆ. ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿಃ 13 ಮತ್ತು 14 ಎಂದು ಗುರುತಿಸಲಾಯಿತು.

8. ಆ ಕಾಲಕ್ಕೆ ದಾಳಿಯ ಟೀಮ್ ನ ಸದಸ್ಯರಾದ ಚಾಸಾಃ 5 ರಿಂದ 12 ಹಾಗೂ ನನ್ನನ್ನು ಸೇರಿ ಪಂಚರು ಹಾಗೂ ಪತ್ರಾಂಕಿತ ಅಧಿಕಾರಿಯ ಮುಂದೆ ಸ್ವಶೋಧನೆ ಮಾಡಿಕೊಂಡು ನಮ್ಮಲ್ಲಿ ಯಾವುದೇ ವಿವಾಧಿತ ವಸ್ತು ಇಲ್ಲದರ ಬಗ್ಗೆ ಖಾತರಿ ಮಾಡಿರುತ್ತೇವೆ.

9. ಅಲ್ಲಿಂದ ನಮ್ಮ ಠಾಣೆಯ ಎರಡು ಜೀಪಗಳಲ್ಲಿ ನಾನು, ಚಾಸಾಃ 2, 3 ಪಂಚರು, ಚಾಸಾಃ 4 ಪತ್ರಾಂಕಿತ ಅಧಿಕಾರಿ, ನಮ್ಮ ಸಿಬ್ಬಂದಿಗಳಾದ ಚಾಸಾಃ 5 ರಿಂದ 12 ರವರು ಬಾತ್ಮೀ ಬಂದ ಸ್ಥಳದ ಕಡೆಗೆ ಹೊರಟಿರುತ್ತೇವೆ. ಅಲ್ಲಿ ಹೋದ ನಂತರ ಸ್ಥಳದ ಸ್ವಲ್ಪ ದೂರ ನಿಂತು ಯಾರಾದರೂ ಅಲ್ಲಿ ಗಾಂಜಾದಂತಹ ಮಾದಕ ವಸ್ತುವನ್ನು ಮಾರಾಟ ಮಾಡುವ ಕೆಲಸದಲ್ಲಿ ತೊಡಗಿದ್ದಾರೆಯೇ ಎಂದು ಗಮನಿಸಿರುತ್ತೇವೆ. ಆಗ ಅಲ್ಲಿ ಇಬ್ಬರು ನಮ್ಮನ್ನು ನೋಡಿ ಓಡಲು ಪ್ರಾರಂಭಿಸಿದರು ಆಗ ನಮ್ಮ ಸಿಬ್ಬಂದಿಯ ಸಹಾಯದಿಂದ ಅವರನ್ನು ಹಿಡಿದಿರುತ್ತೇವೆ. ಆಗ ಅವರುಗಳು ಹೆಸರು, ವಿಳಾಸ ವಿಚಾರಿಸಲಾಗಿ ಒಬ್ಬ ತನ್ನ ಹೆಸರು ಪ್ರವೀಣ ಸುರೇಶ ಕಾಕತಿಕರ, ಇನ್ನೊಬ್ಬ ಈರಪ್ಪಾ ಯಲ್ಲಪ್ಪಾ ಬಾವಿಮನಿ ಎಂದು ಹೇಳಿರುತ್ತಾರೆ. ಆ ಕಾಲಕ್ಕೆ ಪ್ರವೀಣನ ಕೈಯಲ್ಲಿ ಒಂದು ಬಟ್ಟೆಯ ಬ್ಯಾಗ ಇದ್ದು ಅದರಲ್ಲಿ ಯಾವುದೋ ವಸ್ತು ಇತ್ತು. ಈರಪ್ಪನ ಕೈಯಲ್ಲೂ ಸಹ ಒಂದು ಪ್ಲಾಸ್ಟಿಕ್ ಕವರ್ ಇದ್ದು ಅದರಲ್ಲೂ ಸಹ ಯಾವುದೋ ವಸ್ತುಗಳು ಇದ್ದ ಹಾಗೆ ಕಂಡು ಬಂತು. ಆಗ ಅವರನ್ನು ವಿಚಾರಣೆ ಮಾಡಿದಾಗ ಬಟ್ಟೆ ಬ್ಯಾಗ್ ಹಾಗೂ ಪ್ಲಾಸ್ಟಿಕ್ ಕವರ್ ನಲ್ಲಿ ಏನಿದೆ ಎಂದು ವಿಚಾರಣೆ ಮಾಡಿದಾಗ ಅವುಗಳಲ್ಲಿ ಗಾಂಜಾ ಇದೆ ಎಂದು ಹಾಗೂ ಅವುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು ಪ್ರಯತ್ನ ಪಡುತ್ತಿದ್ದೇವೆಂದು ಹೇಳುತ್ತಾರೆ.

10. ಆದಾದ ನಂತರ ಸರ್ಕಾರದ ಪರವಾಗಿ ಅಲ್ಲೇ ದೂರನ್ನು ತಯಾರಿಸಿ ನಮ್ಮ ಠಾಣಾ ಪೇದೆ ಚಾಸಾಃ 6 ರವರ ಮೂಲಕ ಠಾಣೆಗೆ ಕಳುಹಿಸಿ ದಾಖಲಿಸಲು ಸೂಚನೆ ನೀಡಿರುತ್ತೇನೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಇದೇ ಈ ಪ್ರಕರಣದಲ್ಲಿ ನಾನು ದಾಖಲಿಸಿದ ದೂರು ಎಂದು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ಈಗ ನಿಪಿಃ 15 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 15(ಎ) ಎಂದು ಗುರುತಿಸಲಾಯಿತು.

11. ದೂರನ್ನು ತೆಗೆದುಕೊಂಡು ಹೋಗಿದ್ದ ಚಾಸಾಃ 6 ದೂರು ಪಡೆದ ಠಾಣಾಧಿಕಾರಿಯು ದೂರು ದಾಖಲಿಸಿದ್ದಾರೆಂದು ಮಾಹಿತಿ ನೀಡಿರುತ್ತಾರೆ. ಆದಾದ ನಂತರ NDPS ಕಾಯ್ದೆ ಕಲಂ 60 ರಡಿಯಲ್ಲಿ ಆರೋಪಿತರ ಅಂಗಜಪ್ತಿ ಮಾಡಬೇಕಾಗಿದ್ದರಿಂದ ಅವರಿಗೆ ಅಂಗಜಪ್ತಿಯನ್ನು ಹಾಜರಿರುವ ಪತ್ರಾಂಕಿಶ ಅಧಿಕಾರಿಯ ಮುಂದೆ ಮಾಡಬಹುದೇ ಅಥವಾ ಅವರನ್ನು ಹತ್ತಿರದ ನ್ಯಾಯಾಧೀಶರ ಮುಂದೆ ಕರೆದುಕೊಂಡು ಹೋಗಬೇಕೆ ಎಂದು ಕೇಳಿ ನೋಟೀಸ್ ನೀಡಿರುತ್ತೇನೆ. ಅದಕ್ಕೆ ಆರೋಪಿತರು ತಮ್ಮ ಅಂಗಶೋಧನೆಯನ್ನು ಪತ್ರಾಂಕಿತ ಅಧಿಕಾರಿಯ ಮುಂದೆ ಮಾಡಬಹುದು ಎಂದು ತಮ್ಮ ಅಭಿಪ್ರಾಯ ನೀಡಿರುತ್ತಾರೆ. ಸಾಕ್ಷಿಯು ಆರೋಪಿತರಿಗೆ ನೀಡಿದ ನೋಟೀಸ್ ಹಾಗೂ ಅವರು ನೀಡಿದ ಒಪ್ಪಿಗೆ ಪತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗ ಕ್ರಮವಾಗಿ ನಿಪಿಃ 16 ರಿಂದ 18 ಎಂದು ಗುರುತಿಸಲಾಯಿತು.

12. ಆ ನಂತರ ಪತ್ರಾಂಕಿತ ಅಧಿಕಾರಿ ಹಾಗೂ ಪಂಚರ ಸಮಕ್ಷಮ ಆರೋಪಿತರ ಅಂಗಶೋಧನೆಯನ್ನು ಮಾಡಿರುತ್ತೇನೆ. ಆ ಕಾಲಕ್ಕೆ 1 ನೇ ಆರೋಪಿ ಹಿಡಿದುಕೊಂಡಿದ್ದ ಬಟ್ಟೆಯ ಬ್ಯಾಗ್ ನಲ್ಲಿ ಒಂದು ಪ್ಲಾಸ್ಟಿಕ್ ಚೀಲ ಇದ್ದು ಅದರಲ್ಲಿ ಗಾಂಜಾ ಇತ್ತು. ಅದನ್ನು ತೂಕ ಮಾಡಿದಾಗ ಅದು 1250 ಗ್ರಾಂ ಗಾಂಜಾ ಇರುವುದು ಕಂಡು ಬಂತು. ಅದು ಬಿಟ್ಟು ಆತನ ಅಂಗಜಪ್ತಿ ಕಾಲಕ್ಕೆ ಯಾವುದೇ ವಸ್ತುಗಳು ದೊರಕಿರುವುದಿಲ್ಲ.

13. 2 ನೇ ಆರೋಪಿಯ ಅಂಗಜಪ್ತಿ ಕಾಲಕ್ಕೆ ಆತನ ಬಳಿ ರೂ.910/– ನಗದು ಹಣ ಹಾಗೂ ಆತನ ಕೈಯಲ್ಲಿ ಹಿಡಿದುಕೊಂಡಿದ್ದ ಪ್ಲಾಸ್ಟಿಕ್ ಬ್ಯಾಗ್ ನಲ್ಲಿ ಸಣ್ಣ ಸಣ್ಣ 20 ಪ್ಲಾಸ್ಟಿಕ್ ಪೌಚ್ ಗಳಿದ್ದು ಅವುಗಳಲ್ಲಿ ಗಾಂಜಾ ಇದ್ದವು. ಆ ಪೌಚ್ ಗಳಲ್ಲಿದ್ದ ಗಾಂಜಾವನ್ನು ಒಂದು ಕಡೆ

ಹಾಕಿ ತೂಕ ಮಾಡಿದಾಗ ಅದು 134 ಗ್ರಾಂ ಗಾಂಜಾ ಇತ್ತು. ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಬರೆದು ಆರೋಪಿ 1 ಹಾಗೂ 2 ರವರ ಬಳಿಯಿದ್ದ ಗಾಂಜಾ ಹಾಗೂ 2 ನೇ ಆರೋಪಿಯ ಬಳಿಯಿದ್ದ ಹಣವನ್ನು ಜಪ್ತು ಮಾಡಿರುತ್ತೇನೆ. ಆ ಕಾಲಕ್ಕೆ ಫೋಟೋ ಹಾಗೂ ವಿಡಿಯೋ ಮಾಡಿಸಿರುತ್ತೇನೆ.

14. ಸಾಕ್ಷಿಯು ಈಗ ಪಂಚನಾಮೆಯನ್ನು ನೋಡಿ ಅದರಲ್ಲಿ ತನ್ನ ಸಹಿ ಇದೆ ಎಂದು ಗುರುತಿಸಿದ್ದರಿಂದ ಅದನ್ನು ಈಗ ನಿಪಿಃ 19 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 19(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಈಗ ಒಟ್ಟು 9 ಫೋಟೋಗಳನ್ನು ನೋಡಿ ಇವುಗಳನ್ನು ಪಂಚನಾಮೆ ಕಾಲಕ್ಕೆ ತೆಗೆಸಿದ್ದವು ಎಂದು ಗುರುತಿಸುತ್ತಾರೆ. ಅವುಗಳನ್ನು ಈಗ ಒಟ್ಟಾರೆಯಾಗಿ ನಿಪಿಃ 20 ಎಂದು ಗುರುತಿಸಲಾಯಿತು.

15. ಆ ನಂತರ ಜಪ್ತಾದ ಮುದ್ದೆ ಮಾಲುಗಳು, ಪಂಚನಾಮೆ, ಫೋಟೋಗಳು, ವಿಡಿಯೋ ಚಿತ್ರೀಕರಣ ಇರುವ ಸಿಡಿ ಹಾಗೂ ಆರೋಪಿತರನ್ನು ಕರೆದುಕೊಂಡು ಹೋಗಿ ಠಾಣಾಧಿಕಾರಿಗಳ ಮುಂದೆ ಸಲ್ಲಿಸಿರುತ್ತೇನೆ.

16. ಈ ಪ್ರಕರಣದಲ್ಲಿ ಜಪ್ತಾದ ಮುದ್ದೆ ಮಾಲುಗಳನ್ನು ತೋರಿಸಿದರೆ ಗುರುತಿಸುತ್ತೇನೆಂದು ಹೇಳುತ್ತಾರೆ. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿದ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು ಸ್ಟಾರ್ ಪಾನ ಮಸಾಲಾದ ಬಟ್ಟೆಯ ಬ್ಯಾಗ್ ಇದ್ದು ಅದನ್ನು ಸಾಕ್ಷಿ ನೋಡಿ ಇದೇ ಬ್ಯಾಗ್ ನಲ್ಲೆ 1 ನೇ ಆರೋಪಿ 1250 ಗ್ರಾಂ ಗಾಂಜಾವನ್ನು ಇಟ್ಟುಕೊಂಡಿದ್ದ ಎಂದು ಹೇಳುತ್ತಾರೆ. ಸದರಿ ಬ್ಯಾಗ್ ನ್ನು ಈಗ ಮು.ಮಾ. 1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಖಜಾನೆಯಿಂದ ಈ ಪ್ರಕರಣದಲ್ಲಿ ಜಪ್ತು ಮಾಡಿದ ಹಣದ ಟ್ರಂಕ್ ನ್ನು ನ್ಯಾಯಾಲಯಕ್ಕೆ ತರಿಸದೇ ಇರುವ ಕಾರಣ ಈ ಸಾಕ್ಷಿಯು ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

**ಓ ಹೇ ಕೇ ಸರಿ ಇದೆ.**

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.